**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ,ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಇಲಾಖೆ, ಹೊಸ ಪೂರಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ.ಆರ್.ಎಂ.ಎಸ್.ಎ01/2009-10 ದಿನಾಂಕ : 19-11-2008

**ಜ್ಞಾಪನ**

ವಿಷಯ:2008-09 ಮತ್ತು 2009-10ನೇ ಸಾಲಿನ ಪ್ರೌಢ ಶಿಕ್ಷಣದ ಮಾಹಿತಿ ನಮೂನೆಗಳನ್ನು ಭರ್ತಿಮಾಡಿ ಡಾಟಾ ಎಂಟ್ರಿ ಮಾಡುವ ಬಗ್ಗೆ

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2009-10 ನೆಯ ಸಾಲಿನಲ್ಲಿ 30 ನೇ ಸೆಪ್ಟಂಬರ್ 2009ದಲ್ಲಿ ಇರುವಂತಹ ಸೆಮಿಸ್ ಮಾಹಿತಿಯನ್ನು ಪ್ರತಿವರ್ಷದಂತೆಯೇ ಈ ವರ್ಷವೂ ಪಡೆಯಬೇಕಾಗಿದೆ. ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜು ಮಾಹಿತಿಯನ್ನು ಸಂಗ್ರಹಿಸಬೇಕಾಗಿದೆ (ಪದವಿ ಪೂರ್ವ ಕಾಲೇಜುಗಳಿಗೂ ಸಹ ನಮೂನೆಗಳನ್ನು ನೀಡಲಾಗಿದೆ). ಇದರಲ್ಲಿ C.B.S.E, I.C.S.E & OPEN SCHOOLS ಗಳ ಮಾಹಿತಿಯೂ ಒಳಗೊಂಡಿರಬೇಕು.

ರಾಜ್ಯ ಕಛೇರಿಯಿಂದ ಡೈಸ್ 2009-10 ಪ್ರಿಂಟೆಡ್ ನಮೂನೆಗಳನ್ನು ದಿನಾಂಕ : 20.11.2009 ರೊಳಗೆ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಕಳುಹಿಸುವ ವ್ಯವಸ್ಥೆಮಾಡಿದೆ. ಈ ಸಾಲಿನಲ್ಲಿ ಸರ್ಕಾರಿ , ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಿಗೆ ವಿವಿಧ ಬಣ್ಣಗಳಲ್ಲಿ ಅಂದರೆ ಸರ್ಕಾರಿ -ಬಿಳಿ, ಅನುದಾನಿತ-ಗುಲಾಬಿ ಮತ್ತು ಅನುದಾನರಹಿತ ಶಾಲೆಗಳಿಗೆ - ನೀಲಿ ಬಣ್ಣದಲ್ಲಿ ನಮೂನೆಗಳನ್ನು ಬ್ಲಾಕ್ ವಾರು ಜಿಲ್ಲಾ ಮಟ್ಟದಲ್ಲಿ ವಿತರಿಸಲಾಗುವುದು.

ನಮೂನೆಗಳನ್ನು ಸರಬರಾಜು ಮಾಡುವವರು ಕರ್ನಾಟಕ ಆಫ್ಸೆಟ್ ಪ್ರಿಂಟರ್ಸ್, ಬೆಂಗಳೂರು (ದೂರವಾಣಿ ಸಂಖ್ಯೆ-2667852, 26611279)

ಮುದ್ರಕರಿಂದ ಪಡೆದ ನಮೂನೆಗಳಿಗೆ ಸ್ವೀಕೃತಿಯನ್ನು ಡಿ.ಡಿ.ಪಿ.ಐ ರವರಿಂದ ಸರಬರಾಜುದಾರರಿಗೆ ನೀಡುವುದು ಹಾಗೂ ನಮೂನೆಗಳನ್ನು ಬ್ಲಾಕ್‌ಗಳಿಗೆ ಸರಬರಾಜು ಮಾಡಿರುವ ಮಾಹಿತಿಯನ್ನು ಜಿಲ್ಲಾ ಕಛೇರಿಯವರು (ನಮೂನೆಗಳ ಸಂಖ್ಯೆ ಮತ್ತು ಸರಬರಾಜು ಮಾಡಿದ ದಿನಾಂಕದೊಂದಿಗೆ) rmsakar@gmail.com ಇ-ಮೇಲ್ ವಿಳಾಸಕ್ಕೆ ಕಡ್ಡಾಯವಾಗಿ ಸಲ್ಲಿಸುವುದು. ನಮೂನೆಗಳ ಸರಬರಾಜನ್ನು 2009-10 ನೆಯ ಸಾಲಿನ ಸೆಮಿಸ್ (ಶಾಲೆಗಳ ಸಂಖ್ಯೆ + ಸಿ.ಆರ್.ಪಿ+ ಶೇ 5 ರಷ್ಟು ಹೆಚ್ಚುವರಿ ನಮೂನೆಗಳು) ಡಾಟಾದ ಆಧಾರದ ಮೇರೆಗೆ ನಿರ್ಧರಿಸಲಾಗಿದೆ. ಪ್ರತಿ ಶಾಲೆಗೆ ಎರಡು ನಮೂನೆಗಳನ್ನು ನೀಡಲಾಗಿದೆ.

ಈ ಸಾಲಿನಲ್ಲಿ ಎಲ್ಲಾ ಜಿಲ್ಲೆಯವರಿಗೆ ಶಾಲಾ ಡೈರಕ್ಟರಿಯನ್ನು ತಯಾರಿಸಿ 2009-10 ನೇ ಸಾಲಿನ ಮಾಹಿತಿಗಳನ್ನು ದಿ: 17-08-09 ರೊಳಗೆ ತಯಾರಿಸಲು ಸೂಚಿಸಲಾಗಿದೆ. ಸೆಮಿಸ್ ನಮೂನೆಗಳನ್ನು ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ ವೆಬ್ ಸೈಟ್ ನಲ್ಲಿ (schooleducation.kar.nic.in )ನಲ್ಲಿ ನೀಡಲಾಗಿದ್ದು, ಸದರಿ ನಮೂನೆಗಳನ್ನು ಪಡೆದು ಸಿ.ಎ.ಇ.ಓ, ಪ್ರೌಢ ಶಾಲೆಯ ಮುಖ್ಯ ಶಿಕ್ಷಕರು, ಬಿ.ಆರ್.ಪಿ ಮತ್ತು ಸಿ.ಆರ್.ಪಿ ರವರಿಗೆ ಮತ್ತು ಸೆಮಿಸ್ ನಮೂನೆಗಳ ಭರ್ತಿಮಾಡುವ ಬಗ್ಗೆ ತರಬೇತಿಯನ್ನು ನೀಡಲಾಗಿದೆ. ನಮೂನೆಗಳು ಕಡಿಮೆಯಾದರೆ Semisonline.net ವೆಬ್-ಸೆಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಸಿ.ಎ.ಇ.ಓ, ಪ್ರೌಢ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಸಿ.ಆರ್.ಪಿ ಸೆಪ್ಟಂಬರ್ 10 ರೊಳಗೆ ನಡೆಸುವುದು.

ಸೆಮಿಸ್ ನಮೂನೆಗಳ ಭರ್ತಿಮಾಡುವ ಬಗ್ಗೆ ತರಬೇತಿಯನ್ನು ಎಲ್ಲಾ ಶಾಲೆಯ ಮುಖ್ಯಸ್ತರಿಗೆ ನಡೆಸುವುದು. ಸದರಿ ತರಬೇತಿ ವೆಚ್ಚವನ್ನು ಸೇವಾ ನಿರತ ಶಿಕ್ಷಕರ ತರಬೇತಿ ದಿವಸದಲ್ಲಿ ಒಂದು ದಿವಸವೆಂದು ಪರಿಗಣಿಸಿ ವೆಚ್ಚವನ್ನು ಭರಿಸುವುದು.

ಬ್ಲಾಕ್‌ಗೆ ಸರಬರಾಜು ಮಾಡುವ ನಮೂನೆಗಳನ್ನು ಈಗಾಗಲೇ ಅಂತಿಮಗೊಳಿಸಿರುವ ಶಾಲಾ ಪಟ್ಟಿಯೊಂದಿಗೆ ಸಿ.ಆರ್.ಪಿ ರವರಿಗೆ ತಲುಪಿಸಬೇಕು. ಸಿ.ಆರ್.ಪಿ ರವರು ಸೆಮಿಸ್ ಕೋಡನ್ನು ಅನುಸಾರ ಶಾಲೆಗಳಿಗೆ ದಿನಾಂಕ 22-09-2009 ರೊಳಗೆ ನೀಡಬೇಕು.

ಸಿ.ಆರ್.ಪಿ ರವರು ತಮ್ಮ ವಲಯದ ಎಲ್ಲಾ ಶಾಲಾ ಮಾಹಿತಿಗಳ ನಮೂನೆಗಳನ್ನು ಕಡ್ಡಾಯವಾಗಿ ಶಾಲೆಯಲ್ಲಿ ಪರಿಶೀಲಿಸಿ ಧೃಡಿಕರಿಸಿಕೊಂಡು ನಂತರ ಕ್ಷೇತ್ರ ಸಮನ್ವಯಾಧಿಕಾರಿರವರಿಗೆ 03-10-2009 ರೊಳಗೆ ಕಡ್ಡಾಯವಾಗಿ ಸಲ್ಲಿಸಬೇಕು.

ಕ್ಷೇತ್ರ ಸಮನ್ವಯಾಧಿಕಾರಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶೇ 25 ರಷ್ಟು ಶಾಲಾ ನಮೂನೆಗಳನ್ನು ಪರಿಶೀಲಿಸಬೇಕು ಹಾಗೂ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿಗಳು ಶೇ 10 ರಷ್ಟು ಶಾಲಾ ನಮೂನೆಗಳನ್ನು ಪರಿಶೀಲಿಸಬೇಕು

ಡಾಟಾ ಎಂಟ್ರಿಯನ್ನು ಬ್ಲಾಕ್ ಹಂತದಲ್ಲಿ ಮಾಡಬೇಕು, ಬ್ಲಾಕ್ ಹಂತದಲ್ಲಿ ಯಾವುದೇ ಸಮಸ್ಯೆಗಳಿದ್ದಲ್ಲಿ ಜಿಲ್ಲಾ ಹಂತದಲ್ಲಿ ಡಾಟಾ ಎಂಟ್ರಿ ಮಾಡಿಸುವ ಸಂಬಂಧ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರೊಂದಿಗೆ ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಸಕಾಲದಲ್ಲಿ ಡಾಟಾಎಂಟ್ರಿಮಾಡಿಸುವುದು. ಡಾಟಾ ಎಂಟ್ರಿ ಕಾರ್ಯಕ್ಕಾಗಿ ಯಾವುದೇ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಈಗಾಗಲೇ ಎಸ್.ಎಸ್.ಎ ಮೂಲಕ ಬ್ಲಾಕ್ ಮಟ್ಟಕ್ಕೆ ನೀಡಿರುವ ಡಾಟಾ ಎಂಟ್ರಿ ಆಪರೇಟರ್ ರವರ ಮೂಲಕ ಆಧ್ಯತೆಯ ಮೇರೆಗೆ ಕೆಲಸ ಪೂರ್ಣಗೊಳಿಸಬೇಕಾಗಿದೆ..

ಡಾಟಾ ಎಂಟ್ರಿ ಮಾಡುವ ಮೊದಲು ಜಿಲ್ಲಾ ಹಂತದಲ್ಲಿ ಪ್ರೋಗ್ರಾಮರ್ ರವರು ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಬ್ಲಾಕ್ ಹಂತದ ಡಾಟಾಎಂಟ್ರಿ ಆಪರೇಟರ್‌ಗಳನ್ನು ಕರೆದು ಸಾಫ್ಟ್‌ವೇರ್ ಬಗ್ಗೆ ಹಾಗೂ ತಾಂತ್ರಿಕ ಸಮಸ್ಯೆಗಳ ನಿವಾರಣೆಗೆ ಒಂದು ದಿನದ ತರಬೇತಿಯನ್ನು ದಿನಾಂಕ **03-10-2009** ರೊಳಗೆ ನೀಡಬೇಕು. ಈ ತರಬೇತಿ ಆಯೋಜಿಸುವುದು ಜಿಲ್ಲಾ ಡಿ.ವೈ.ಪಿ.ಸಿ ರವರ ಜವಾಬ್ದಾರಿಯಾಗಿದೆ. ಅನಂತರವೂ ಬ್ಲಾಕ್ ಹಂತದಲ್ಲಿ ಸಮಸ್ಯೆ ಉದ್ಭವಿಸಿದ್ದಲ್ಲಿ ಜಿಲ್ಲಾ ಪ್ರೋಗ್ರಾಮರ್ ರವರು ಬ್ಲಾಕ್‌ಗಳಿಗೆ ತೆರಳಿ ಮಾರ್ಗದರ್ಶನವನ್ನು ನೀಡಬೇಕು.

ಬ್ಲಾಕ್ ಮಟ್ಟದಲ್ಲಿ ಡಾಟಾ ಎಂಟ್ರಿಯನ್ನು ದಿನಾಂಕ 25**-10-2009** ರೊಳಗೆ ಪೂರ್ಣಗೊಳಿಸಿ ನಂತರ ಡೈಸ್ ನಲ್ಲಿರುವ ಮಾಹಿತಿಯು ಸರಿಯಾಗಿದೆ ಎಂದು ಸೆಮಿಸ್ ರಿಪೋರ್ಟ್‌ಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಯವರು ಸಹಿಮಾಡಿದ **ದೃಢೀಕರಣ ಪತ್ರವನ್ನು ಹಾಗೂ ಸಿ.ಡಿ.ಯನ್ನು** ದಿನಾಂಕ: 31-10-2009 ರೊಳಗೆ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ನೀಡಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳು ನೀಡಿರುವ ಡಾಟಾ ಸರಿಯಾಗಿದೆ ಎಂಬುದನ್ನು ಜಿಲ್ಲಾ ಉಪನಿರ್ದೇಶಕರು ಖಾತ್ರಿ ಪಡಿಸಿಕೊಳ್ಳಬೇಕು. ಜಿಲ್ಲಾ ಮಾಹಿತಿಯು ಸರಿಯಾಗಿದೆ ಎಂದು ಉಪನಿರ್ದೇಶಕರ ದೃಢೀಕರಣದ ಪತ್ರದ ಜೊತೆಗೆ ಸಿ.ಡಿಯನ್ನು ದಿನಾಂಕ 5-11-2009 ರೊಳಗೆ ರಾಜ್ಯ ಇ-ಆಡಳಿತ ಕಛೇರಿಗೆ ಸಲ್ಲಿಸಬೇಕು. ಹಾಗೂ ಜಿಲ್ಲೆಗಳಿಂದ ನೀಡಿರುವ ಅಂಕಿ-ಅಂಶಗಳ ಮಾಹಿತಿಯ ಆಧಾರದ ಮೇಲೆ **20010-11 ನೆಯ ಎಸ್.ಎಸ್.ಎ ವಾರ್ಷಿಕ ಪ್ಲಾನ್ (೦ಘಾ&ಃ) ಜಿಲ್ಲಾ / ರಾಜ್ಯ ಹಂತದಲ್ಲಿ ಸಿದ್ದಪಡಿಸಬೇಕಾಗಿದೆ .**

ದಿನಾಂಕ: 30.11.09 ರೊಳಗೆ ತಮ್ಮ ಜಿಲ್ಲೆಯ ಪ್ರೌಢ ಶಾಲಾ ಶೈಕ್ಷಣಿಕ ನಮೂನೆಗಳನ್ನು ಸಂಗ್ರಹಣೆ ಮಾಡಿ ವರದಿ ಮಾಡುವುದು.

ದಿನಾಂಕ: 1.12.09 ಮತ್ತು 08.12.09ರೋಳಗೆ ತಮ್ಮ ಜಿಲ್ಲೆಯ ಎಲ್ಲಾ ಪ್ರೌಢ ಶಾಲಾ ಶಿಕ್ಷಣದ ಮಾಹಿತಿಯನ್ನು Online ಮುಖಾಂತರ Semisonline.net ಈ ತಂತ್ರಾಂಶದಲ್ಲಿ ಗಣಕೀಕರಣ ಮಾಡಿ ವರದಿಯನ್ನು ಮಾಡುವುದು.

ದಿನಾಂಕ: 10.12.09 ರೊಳಗೆ ತಮ್ಮ ಜಿಲ್ಲೆಯ ಎಲ್ಲಾ ಪ್ರೌಢಶಿಕ್ಷಣದ ಮಾಹಿತಿಗಳನ್ನು ಗಣಕೀರಣ ಮಾಡಿರುವ ಬಗ್ಗೆ ಮಾಹಿತಿ ತಿಳಿಸುವುದು

ರಾಜ್ಯ ಯೋಜನಾ ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಇಲಾಖೆ,
ಬೆಂಗಳೂರು

ರವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸೂಕ್ತ ಕ್ರಮಕ್ಕಾಗಿ,
2. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ಸೂಕ್ತ ಕ್ರಮಕ್ಕಾಗಿ,
3. ಎಸ್.ಎಸ್.ಎ ರಾಜ್ಯ ಕಛೇರಿಯಲ್ಲಿರುವ ಎಲ್ಲಾ ಜಿಲ್ಲಾ ಉಸ್ತುವಾರಿ ಅಧಿಕಾರಿಗಳಿಗೆ ಸೂಕ್ತಕ್ರಮಕ್ಕಾಗಿ,
4. ರಾಜ್ಯದ ಎಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು ಹಾಗೂ ಜಿಲ್ಲಾ ಪ್ರೋಗ್ರಾಮರ್‌ರವರು ಸರ್ವಶಿಕ್ಷಣ ಅಭಿಯಾನ ರವರಿಗೆ,
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ಮುಖ್ಯ ಲೆಕ್ಕಾಧಿಕಾರಿಗಳು ಸರ್ವಶಿಕ್ಷಣ ಅಭಿಯಾನ, ಬೆಂಗಳೂರು.
7. ಇ–ಆಡಳಿತ ಘಟಕದ ಎಲ್ಲಾ ಅಧಿಕಾರಿಗಳು ಹಾಗೂ ಕಾರ್ಯಕ್ರಮಾಧಿಕಾರಿಗಳು ಇ–ಆಡಳಿತ ಘಟಕ, ಧಾರವಾಡ ಮತ್ತು ಗುಲ್ಬರ್ಗಾ.
8. ಶ್ರೀ ಕೆ ಪ್ರಭಾಕರ್, ಉಪನಿರ್ದೇಶಕರು, ಅಂಕಿ–ಅಂಶ ವಿಭಾಗ ಆಯುಕ್ತರ ಕಛೇರಿ, ಬೆಂಗಳೂರು.
9. ಪ್ರೊ. ಸೀತಾರಾಮ್, ಸಮಾಲೋಚಕರು, ಸರ್ವಶಿಕ್ಷಣ ಅಭಿಯಾನ ರಾಜ್ಯ ಕಛೇರಿ, ಬೆಂಗಳೂರು
10. ಇ–ಆಡಳಿತ ಘಟಕದ ಎಲ್ಲಾ ಅಧಿಕಾರಿಗಳಿಗೆ ಹಾಗೂ ಪ್ರೋಗ್ರಾಮರ್ ರವರಿಗೆ.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.

1. ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ, ಕರ್ನಾಟಕ, ಬೆಂಗಳೂರು.
4. ಅಪರ ಆಯುಕ್ತರು, ಸಾ.ಶಿ.ಇ ಗುಲ್ಬರ್ಗಾ ಮತ್ತು ಧಾರವಾಡ
5. ಕಛೇರಿ ಪ್ರತಿ